# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. :14 ಫಾ್ರ.ಸಾ. : 4**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಮತಿ ಹೀನಾ ಕೌಸರ್ |
| ಗಂಡನ ಹೆಸರು | : | ಮಹಮ್ಮದ ಮೀರಾ ಸಿಕಂದರ್ |
| ವಯಸ್ಸು | : | 47 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ಜನತಾ ಕಾಲೋನಿ, ಚಂದಾವರ, ಹೊನ್ನಾವರ ತಾಲೂಕು. |

**ದಿನಾಂಕಃ 04-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-15 ನನ್ನ ಅಕ್ಕನ ಮಗಳು. ಚಾಸಾ-10 ರವರು ಚಾಸಾ-15 ರವರ ಗಂಡ. ಚಾಸಾ-1 ರವರು ಮೃತ ಅಬುತಾಲೀಬ ರವರ ಹೆಂಡತಿ ಹಾಗೂ ಚಾಸಾ-19 ಮೃತ ಅಬುತಾಲೀಬ ರವರ ಮಗ. ಮೃತ ಅಬುತಾಲೀಬ ನನಗೆ ಗೊತ್ತು, ಅವರು ನಮ್ಮ ಕೇರಿಯ 2 ನೇ ಓಣಿಯವರು. ನನ್ನ ಮನೆ ಚಂದಾವರದ ಜನತಾ ಕಾಲೋನಿಯಲ್ಲಿ ಇರುತ್ತದೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು, ಆತ ನಮ್ಮ ಪಕ್ಕದ ಮನೆಯವನು, ಅವರ ಮನೆಯಲ್ಲಿ ಆತನ ಹೆಂಡತಿ ಮತ್ತು ತಂದೆ-ತಾಯಿ ಇರುತ್ತಿದ್ದರು. ನಮ್ಮಿಬ್ಬರ ಮನೆಗಳ ನಡುವೆ ಕಂಪೌಂಡ ಇರುತ್ತದೆ. ನನ್ನ ಗಂಡ ಸೌದಿಯಲ್ಲಿ ಕೆಲಸ ಮಾಡುತ್ತಿರುತ್ತಾರೆ ಹಾಗೂ ನನ್ನ ಮಗ ಮಸ್ಕತ್ ನಲ್ಲಿ ಕೆಲಸ ಮಾಡುತ್ತಿರುತ್ತಾನೆ. ನಮ್ಮ ಮನೆಯಲ್ಲಿ ನಾನು ಹಾಗೂ ನನ್ನ ಮಗಳು ವಾಸವಾಗಿರುತ್ತೇವೆ. ನನ್ನ ಗಂಡ ಎರಡು ವರ್ಷಕ್ಕೊಮ್ಮೆ ಹಾಗೂ ನನ್ನ ಮಗ ಒಂದು ವರ್ಷಕ್ಕೊಮ್ಮೆ ಬಂದು ಹೋಗುತ್ತಿರುತ್ತಾರೆ. ಆರೋಪಿ ಸಹಾ ಈ ಮೊದಲು ಹೊರ ದೇಶದಲ್ಲಿ ಕೆಲಸ ಮಾಡುತ್ತಿದ್ದ. ಆತ ವರ್ಷಕ್ಕೆ ಎರಡು ಬಾರಿ ಊರಿಗೆ ಬಂದು ಹೋಗುತ್ತಿದ್ದ. ಈ ಪ್ರಕರಣದ ಘಟನೆ ನಡೆಯುವ ಕಾಲಕ್ಕೆ ಮೂರು ತಿಂಗಳ ಮೊದಲು ಆರೋಪಿ ಊರಿಗೆ ಬಂದು, ಮನೆಯಲ್ಲಿಯೇ ಇದ್ದ.

2. ನಮ್ಮ ಮನೆಯ ಕಾಂಪೌಂಡನಲ್ಲಿ ಬಾವಿ ಇದ್ದು, ಅದರಲ್ಲಿ ಯಾವಾಗಲೂ ನೀರು ಇರುತ್ತದೆ. ನಮ್ಮ ಕೇರಿಯ ಜನರು ನೀರು ತೆಗೆದುಕೊಂಡು ಹೋಗಲು ಹಾಗೂ ಬಟ್ಟೆ ತೊಳೆಯಲು ನಮ್ಮ ಬಾವಿಗೆ ಬಂದು ಹೋಗುತ್ತಿದ್ದರು. ಅದೇ ರೀತಿ ನಮ್ಮ ಕೇರಿಯಲ್ಲಿರುವ ನಮ್ಮ ಸಂಬಂಧಿಕರೂ ಸಹಾ ನಮ್ಮ ಮನೆಗೆ ನೀರಿಗಾಗಿ ಬರುತ್ತಿದ್ದರು ಹಾಗೂ ಅಲ್ಲಿಯೇ ಸ್ನಾನವನ್ನು ಸಹಾ ಮಾಡುತ್ತಿದ್ದರು. ಈ ರೀತಿ ನಮ್ಮ ಬಾವಿಗೆ ನೀರು ತೆಗೆದುಕೊಂಡು ಹೋಗಲು ಬರುತ್ತಿದ್ದ ಹೆಂಗಸರಿಗೆ ಹಾಗೂ ಹೆಣ್ಣು ಮಕ್ಕಳಿಗೆ ಹಿಂದಿನಿಂದ ಬಂದು ತಬ್ಬಿಕೊಳ್ಳುವುದು, ಅಶ್ಲೀಲವಾಗಿ ಮಾತನಾಡುವುದು ಹಾಗೂ ತನ್ನ ಲುಂಗಿಯನ್ನು ಎತ್ತಿ ತನ್ನ ಗುಪ್ತಾಂಗವನ್ನು ತೋರಿಸುವುದು, ಕೈ ಸನ್ನೆ ಮಾಡಿ ಕರೆಯುವುದು, ಅಸಭ್ಯವಾಗಿ ವರ್ತಿಸುವುದು ಮಾಡುತ್ತಿದ್ದ. ಆಗ ಹೆಂಗಸರು ಮತ್ತು ಹೆಣ್ಣು ಮಕ್ಕಳು ಆರೋಪಿಯ ವರ್ತನೆಯನ್ನು ನನ್ನ ಬಳಿ ಬಂದು ಹೇಳುತ್ತಿದ್ದರು. ಆದ್ದರಿಂದ ನಾನೂ ಸಹಾ ಹಲವು ಬಾರಿ ಆರೋಪಿಗೆ ಬುದ್ಧಿವಾದ ಹೇಳಿರುತ್ತೇನೆ, ಆದರೆ ಆರೋಪಿಯು ತನ್ನ ವರ್ತನೆಯನ್ನು ಬದಲಾಯಿಸಿಕೊಂಡಿರುವುದಿಲ್ಲ ಹಾಗೂ ಅದೇ ವರ್ತನೆಯನ್ನು ಮುಂದುವರಿಸಿದ್ದ.

3. ನಮ್ಮ ಮನೆಯಲ್ಲಿ ನನ್ನ ಗಂಡ ಹಾಗೂ ನನ್ನ ಮಗ ಹೊರ ದೇಶದಲ್ಲಿ ಇದ್ದುದ್ದರಿಂದ, ನಾನು ಸದರಿ ಹೆಂಗಸರು ಮತ್ತು ಹೆಣ್ಣು ಮಕ್ಕಳಿಗೆ, ನಮ್ಮ ಊರಿನ ಹಿರಿಯರಾದ ಅಬುತಾಲೀಬ ರವರ ಬಳಿ ಹೋಗಿ ಹೇಳುವಂತೆ ಸೂಚಿಸಿರುತ್ತೇನೆ ಹಾಗೂ ನಾನೂ ಸಹಾ ಅಬುತಾಲೀಬ ರವರ ಬಳಿ ಆರೋಪಿಯ ವರ್ತನೆಯ ಬಗ್ಗೆ ಹೇಳಿರುತ್ತೇನೆ. ಕೇರಿಯ ಹೆಂಗಸರು ಮತ್ತು ಹೆಣ್ಣು ಮಕ್ಕಳು ಆರೋಪಿಯ ವರ್ತನೆಯ ಬಗ್ಗೆ ಅಬುತಾಲೀಬ ರವರ ಬಳಿ ಹೇಳಿದ ನಂತರ ಅಬುತಾಲೀಬ ರವರು ಆರೋಪಿಗೆ ಈ ರೀತಿ ಎಲ್ಲಾ ಮಾಡಬೇಡಾ, ಹೆಂಗಸರು ಹಾಗೂ ಹೆಣ್ಣು ಮಕ್ಕಳಿಗೆ ತೊಂದರೆ ಕೊಡಬೇಡಾ ಎಂದು ಬುದ್ಧಿವಾದ ಹೇಳಿರುತ್ತಾರೆ. ಆದರೆ, ಆರೋಪಿ ಅಬುತಾಲೀಬ ರವರಿಗೆ "ಬೇರೆ ಹೆಂಗಸರ ವಿಷಯ ನಿನಗೆ ಯಾಕೆ ಬೇಕು, ಅದನ್ನು ಕೇಳಲು ನೀನು ಯಾರು" ಎಂದು ಹೇಳುತ್ತಿದ್ದ ಹಾಗೂ ತನ್ನ ವರ್ತನೆಯನ್ನು ಮುಂದುವರಿಸಿದ್ದ. ಅಬುತಾಲೀಬ ರವರು ಆರೋಪಿಗೆ ಬುದ್ಧಿವಾದ ಹೇಳುತ್ತಿದ್ದುದರಿಂದ, ಆತ ಅಬುತಾಲೀಬ ರವರ ಮೇಲೆ ಸಿಟ್ಟಿನಿಂದ ಇದ್ದನು.

4. 2021 ರ ಏಪ್ರಿಲ್ ತಿಂಗಳಿನಲ್ಲಿ ನಾನು ನನ್ನ ಮಗಳೊಂದಿಗೆ ಮನೆಯಲ್ಲಿ ಮಲಗಿದ್ದಾಗ ರಾತ್ರಿ ಸಮಯದಲ್ಲಿ ಆರೋಪಿ ನಮ್ಮ ಮನೆಯ ಕಿಟಕಿಯನ್ನು ಬಡಿಯುವುದು ಹಾಗೂ

ತೆರೆಯುವುದು, ಕಿಟಕಿಯಿಂದ ಇಣಕಿ ನೋಡುವುದು, ಬ್ಯಾಟರಿ ಬೆಳಕನ್ನು ಬಿಡುವುದು, ಕೈ ಸನ್ನೆ ಮಾಡುವುದು, ಕಣ್ಣು ಹೊಡೆಯುವುದು, ಕಿಸ್ ಮಾಡುವಂತೆ ಸನ್ನೆ ಮಾಡುವುದು, ತನ್ನ ಲುಂಗಿಯನ್ನು ಎತ್ತಿ ತನ್ನ ಗುಪ್ತಾಂಗವನ್ನು ತೋರಿಸುವುದು, ಅಸಭ್ಯವಾಗಿ ವರ್ತಿಸುವುದು ಮಾಡುತ್ತಿದ್ದ ಹಾಗೂ ನನಗೆ ತೊಂದರೆ ಕೊಡುತ್ತಿದ್ದ. ನಾನು ಕಿಟಕಿ ಬಳಿ ಯಾರು ಎಂದು ನೋಡಲು ಹೋದಾಗ, ಆತ ಅಲ್ಲಿಂದ ಓಡಿ ಹೋಗುತ್ತಿದ್ದ. ಈ ಮೊದಲೂ ಸಹಾ ಆತ ವಿದೇಶದಿಂದ ಬಂದಾಗ, ಇದೇ ರೀತಿಯ ಕೃತ್ಯಗಳನ್ನು ಮಾಡುತ್ತಿದ್ದ ಹಾಗೂ ನನಗೆ ತೊಂದರೆಯನ್ನು ಕೊಡುತ್ತಾ ಬರುತ್ತಿದ್ದ.

5. ದಿನಾಂಕಃ 20.04.2021 ರಂದು ಮದ್ಯಾಹ್ನ 3.00 ಘಂಟೆ ಸಮಯದಲ್ಲಿ ನಾನು ನಮ್ಮ ಮನೆಯ ಹಿಂದೆ ರಸ್ತೆ ನಿರ್ಮಾಣ ಮಾಡುತ್ತಿದ್ದ ಗುತ್ತಿಗೆದಾರನ ಜೊತೆ ಮಾತನಾಡುತ್ತಿದ್ದಾಗ, ಆರೋಪಿ ತನ್ನ ಮನೆಯ ಕಂಪೌಂಡನಲ್ಲಿ ನಿಂತು, ನನ್ನನ್ನು ಗಮನಿಸುತ್ತಿದ್ದ, ಅಶ್ಲೀಲವಾಗಿ ಕೈ ಸನ್ನೆ ಮಾಡುತ್ತಿದ್ದ ಹಾಗೂ ತನ್ನ ಲುಂಗಿಯನ್ನು ಎತ್ತಿ ಅಸಭ್ಯವಾಗಿ ವರ್ತಿಸುತ್ತಿದ್ದ. ಗುತ್ತಿಗೆದಾರ ಅಲ್ಲಿಂದ ಹೋದ ನಂತರ ಆರೋಪಿ ನಮ್ಮ ಮನೆಯ ಕಂಪೌಂಡ ಒಳಗಡೆ ಬಂದು ನನ್ನ ಜೊತೆ ಬಾ ಎಂದು, ನನ್ನ ಕೈ ಹಿಡಿದು ಎಳೆದಾಡಿ, ಅಶ್ಲೀಲ ಪದಗಳನ್ನು ಬಳಸಿ, ಕೆಟ್ಟದಾಗಿ ಬೈದನು ಹಾಗೂ ನೀನು ನನ್ನ ಜೊತೆ ಬರದಿದ್ದರೆ, ನಿನ್ನನ್ನು ಕೊಂದು ಹಾಕುತ್ತೇನೆಂದು ಜೀವ ಬೆದರಿಕೆ ಹಾಕಿದ.

6. ಆರೋಪಿಯ ಕೃತ್ಯದಿಂದ ಹಾಗೂ ಕಿರುಕುಳದಿಂದ ಬೇಸತ್ತು, ನಾನು ಅದೇ ದಿನ ಹೊನ್ನಾವರ ಪೊಲೀಸ್ ಠಾಣೆಗೆ ಹೋಗಿ ಆರೋಪಿ ವಿರುದ್ಧ ದೂರನ್ನು ನೀಡಿರುತ್ತೇನೆ. ಸದರಿ ಪ್ರಕರಣದಲ್ಲಿ ಮೃತ ಅಬುತಾಲೀಬ ರವರು ಸಾಕ್ಷಿದಾರರಾಗಿರುತ್ತಾರೆ. ದೂರು ನೀಡಿದ ನಂತರ ಅದೇ ದಿನ ಸಂಜೆ ಆರೋಪಿ ನನ್ನನ್ನು ಕೊಲೆ ಮಾಡುತ್ತೇನೆ ಎಂದು ಹೇಳಿ, ಚಾಕುವನ್ನು ತೋರಿಸುತ್ತಿದ್ದ, ಆರೋಪಿಗೆ ಹೆದರಿ, ನಾನು ಹಾಗೂ ನನ್ನ ಮಗಳು ಚಾಸಾ-15 ರವರ ಮನೆಗೆ ಹೋದೆವು. ಅವರ ಮನೆಗೆ ಹೋಗುವಾಗಲೂ ಸಹಾ ಆರೋಪಿ ತನ್ನ ಕೈಯಲ್ಲಿ ಚಾಕುವನ್ನು ಹಿಡಿದುಕೊಂಡು ನಮ್ಮನ್ನು ಹಿಂಬಾಲಿಸುತ್ತಾ ಬರುತ್ತಿದ್ದ. ಈ ವಿಷಯವನ್ನು ನಾನು ಅಬುತಾಲೀಬ ರವರಿಗೆ ಹೇಳಿದ್ದು, ಅವರು ಆರೋಪಿಗೆ ಯಾಕೆ ಈ ರೀತಿ ಮಾಡುತ್ತಿಯಾ ಎಂದು ಪುನಃ ಕೇಳಿದಾಗ, ಆರೋಪಿ ಅಬುತಾಲೀಬ ರವರಿಗೆ ನೀನು ಯಾಕೆ ಇದನ್ನೆಲ್ಲಾ ಕೇಳುತ್ತಿಯಾ, ನಿನಗೂ ಇದಕ್ಕೂ ಸಂಬಂಧ ಇಲ್ಲಾ ಎಂದು ಜೋರು ಮಾಡಿದ್ದ. ಈ ವಿಷಯವನ್ನು ನಾನು ಆರೋಪಿಯ ಹೆಂಡತಿ ಮತ್ತು ತಂದೆ-ತಾಯಿಯವರಿಗೂ ಸಹಾ

ಹೇಳಿರುತ್ತೇನೆ. ಆದರೆ, ಅವರು ಕೇಳಿ ಸುಮ್ಮನಾಗಿರುತ್ತಾರೆ ಹಾಗೂ ಆರೋಪಿಯು ತನ್ನ ಚಾಳಿಯನ್ನು ಮುಂದುವರಿಸಿರುತ್ತಾನೆ.

7. ದಿನಾಂಕಃ 03.05.2021 ರಂದು ಚಾಸಾ-15 ರವರು ತಮ್ಮ ಮನೆಯಲ್ಲಿ ನೀರು ಇಲ್ಲದ ಕಾರಣ ನಮ್ಮ ಮನೆಗೆ ಬಟ್ಟೆ ತೊಳೆಯಲು ಬಂದಿದ್ದು, ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಅವರು ನಮ್ಮ ಮನೆಯ ಕಾಂಪೌಂಡ ಒಳಗೆ ಬಟ್ಟೆ ತೊಳೆಯುತ್ತಿದ್ದಾಗ ಪಕ್ಕದ ಮನೆಯಲ್ಲಿದ್ದ ಆರೋಪಿಯು ಆಕೆಗೆ ಕೆಟ್ಟ ಶಬ್ದಗಳಿಂದ ಬೈಯುವುದು, ಅಶ್ಲೀಲವಾಗಿ ಮತನಾಡುವುದು, ಕೈ ಸನ್ನೆ ಮಾಡಿ, ಲುಂಗಿಯನ್ನು ಎತ್ತಿ ತನ್ನ ಗುಪ್ತಾಂಗವನ್ನು ತೋರಿಸಿರುತ್ತಾನೆ. ಈ ಘಟನೆಯಿಂದ ಹೆದರಿ, ಚಾಸಾ-15 ರವರು ಕೂಗಿಕೊಂಡಿರುತ್ತಾರೆ. ಆಗ ನಾನು ನನ್ನ ಮನೆಯಿಂದ ಹೊರಗೆ ಬಂದು, ನೋಡಿರುತ್ತೇನೆ. ನಂತರ ಚಾಸಾ-15 ರವರು ತಮ್ಮ ಮನೆಗೆ ಹೋಗಿ ತನ್ನ ಗಂಡನಾದ ಚಾಸಾ-10 ರವರಿಗೆ ವಿಷಯವನ್ನು ಹೇಳಿದ್ದು, ಆ ನಂತರ ಚಾಸಾ-10 ರವರು ಆ ದಿನ ಮಧ್ಯಾಹ್ನ ಸುಮಾರು 12.45 ಗಂಟೆಗೆ ಅಬುತಾಲೀಬ ರವರ ಮನೆಗೆ ಹೋಗಿ ವಿಷಯವನ್ನು ತಿಳಿಸಿರುತ್ತಾರೆ. ನಂತರ 1.00 ಗಂಟೆ ಸುಮಾರಿಗೆ ಅಬುತಾಲೀಬ, ಆತನ ಹೆಂಡತಿ, ಮಕ್ಕಳು ಹಾಗೂ ಚಾಸಾ-10 ರವರು ಆರೋಪಿಯನ್ನು ಕೇಳಲು ನಮ್ಮ ಮನೆ ಹತ್ತಿರ ಬಂದಾಗ, ಆರೋಪಿಯು ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಎದುರಿಗೆ ಸಿಕ್ಕಿದ್ದು, ಆತನಿಗೆ ಅಬುತಾಲೀಬ ರವರು ಯಾಕೆ ಈ ರೀತಿ ಹೆಂಗಸರಿಗೆಲ್ಲಾ ತೊಂದರೆ ಕೋಡುತ್ತಿಯಾ, ಈ ರೀತಿ ಎಲ್ಲಾ ಮಾಡಬೇಡಾ ಎಂದು ಬುದ್ಧಿವಾದ ಹೇಳಿದಾಗ, ಆತ ಅಬುತಾಲೀಬ ರವರಿಗೆ ನೀನು ಯಾರು ಇದನ್ನೆಲ್ಲಾ ಕೇಳುವುದಕ್ಕೆ, ರಾಂಡ್ ಕೇ ಬೇಟೆ, ಬೇರೆಯವರ ಹೆಂಗಸರ ವಿಷಯ ನಿನಗೆ ಯಾಕೆ ಎಂದು ಬೈದಿರುತ್ತಾನೆ. ಆ ಸಮಯದಲ್ಲಿ ನಾನು ನಮ್ಮ ಮನೆಯ ಕಂಪೌಂಡನಲ್ಲಿ ನಿಂತು ನೋಡುತ್ತಿದ್ದೆ. ಚಾಸಾ-10 ಸಹಾ ನಮ್ಮ ಮನೆಯ ಕಂಪೌಂಡನಲ್ಲಿ ನಿಂತು ಗಲಾಟೆಯಾಗುತ್ತಿದ್ದ ಸನ್ನಿವೇಶವನ್ನು ತನ್ನ ಮೊಬೈಲ್ ನಿಂದ ವೀಡಿಯೋ ಮಾಡುತ್ತಿದ್ದ. ಆ ಸಮಯದಲ್ಲಿ ಚಾಸಾ-11 ಮತ್ತು 12 ರವರೂ ಸಹಾ ಅಲ್ಲಿ ಇದ್ದು, ಆರೋಪಿಗೆ ಬುದ್ಧಿವಾದ ಹೇಳಿರುತ್ತಾರೆ. ಆದರೆ ಆರೋಪಿ ಅವರಿಗೂ ಸಹಾ ನೀವ್ಯಾರು ಕೇಳುವುದಕ್ಕೆ ಎಂದು ಬೈದಿರುತ್ತಾನೆ. ಆಗ ಅಬುತಾಲೀಬ ರವರು ಆರೋಪಿಗೆ ನೀನು ಇದೇ ರೀತಿ ಮಾಡಿದರೆ ಪೊಲೀಸ್ ಠಾಣೆಗೆ ಹೋಗಿ ನಿನ್ನ ವಿರುದ್ಧ ದೂರನ್ನು ನೀಡರುತ್ತೇನೆಂದು ಎಂದು ಹೇಳಿರುತ್ತಾರೆ. ಆಗ ಆರೋಪಿ ತನ್ನ ಮನೆಯ ಒಳಗಡೆ ಹೋಗಿ ಒಂದು ಚಾಕುವನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಬಂದು, ನಿನ್ನನ್ನು ಸಾಯಿಸುತ್ತೇನೆ ಎಂದು ಹೆದರಿಸಿದ, ಆಗ ಅಬುತಾಲೀಬ ರವರು ಅಡಿಕೆ ಮರದ ಪಟ್ಟಿ ಯಿಂದ ಆರೋಪಿ ಚಾಕು ಹಿಡಿದಿದ್ದ ಕೈಗೆ ಚಾಕು ಕೆಳಗೆ ಬಿಳಲೆಂದು ಹೊಡೆದಾಗ, ಆರೋಪಿ

ಅಬುತಾಲೀಬ ರವರಿಗೆ ರಾಂಡ್ ಕೆ ಬೇಟೆ, ನಿನ್ನನ್ನು ಬಿಡುವುದಿಲ್ಲ, ನಿನ್ನನ್ನು ಸಾಯಿಸುತ್ತೇನೆ ಎಂದು ಹೇಳಿ ತನ್ನ ಕೈಯಲ್ಲಿದ್ದ ಚಾಕುವಿನಿಂದ ಅಬುತಾಲೀಬ ರವರ ಎದೆಗೆ ಚುಚ್ಚಿದ ಹಾಗೂ ನನ್ನನ್ನು ಉದ್ದೇಶಿಸಿ ನಿನ್ನನ್ನು ಸಹಾ ಬಿಡುವುದಿಲ್ಲ, ಎಂದು ಚಾಕು ತೋರಿಸಿ, ಹೆದರಿಸಿ, ತನ್ನ ಕೈಯಲ್ಲಿ ಚಾಕುವನ್ನು ಹಿಡಿದುಕೊಂಡು ತನ್ನ ಮನೆಗೆ ಹೊರಟು ಹೋದ. ಆಗ ಸಮಯ ಮಧ್ಯಾಹ್ನ 1.15 ಗಂಟೆ ಆಗಿರುತ್ತದೆ.

8. ಆರೋಪಿಯು ಅಬುತಾಲೀಬ ರವರ ಎದೆಗೆ ಚಾಕುವಿನಿಂದ ಚುಚ್ಚಿದ ಕಾರಣ, ಅವರ ಎದೆಯಿಂದ ರಕ್ತ ನೆಲದ ಮೇಲೆ ಸುರಿಯಿತು, ಅವರ ಕನ್ನಡಕ್ಕೆ ಕೆಳಗೆ ಬಿತ್ತು, ಅವರ ಚಪ್ಪಲಿ ಸಹಾ ಕಿತ್ತು ಬಂದಿರುತ್ತದೆ ಹಾಗೂ ಅವರು ಕೆಳಗೆ ಕುಸಿದು ಬಿದ್ದರು. ಆಗ ಸ್ಥಳಕ್ಕೆ ಚಾಸಾ–13 ಹಾಗೂ 16 ರವರು ಸಹಾ ಬಂದರು, ಆಗ ಚಾಸಾ–1 ಹಾಗೂ ಅವರ ಮಗ, ಚಾಸಾ–13 ರವರು ಚಾಸಾ–16 ರವರ ಆಟೋದಲ್ಲಿ ಅಬುತಾಲೀಬ ರವರನ್ನು ಕುಮಟಾ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ನಂತರ ಮಧ್ಯಾಹ್ನ 1.50 ಗಂಟೆಗೆ ಚಾಸಾ–1 ರವರು ಕರೆ ಮಾಡಿ ಅಬುತಾಲೀಬ ರವರು ತೀರಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಘಟನೆ ನಡೆದಾಗ ಅಬುತಾಲೀಬ ರವರು ಪಿಂಕ್ ಚೆಕ್ಸ ಷರ್ಟ್ ಹಾಗೂ ಲುಂಗಿಯನ್ನು ಧರಿಸಿದ್ದರು ಹಾಗೂ ಆರೋಪಿಯು ನೀಲಿ ಬಣ್ಣದ ಷರ್ಟ್, ಬಿಳಿ ಮತ್ತು ಕಪ್ಪು ಬಣ್ಣದ ಚೆಕ್ಸ ಲುಂಗಿಯನ್ನು ಧರಿಸಿದ್ದನು. ಘಟನೆ ಸಮಯದಲ್ಲಿ ಚಾಸಾ–10 ರವರು ಮಾಡಿದ ವೀಡಿಯೋವನ್ನು ನನಗೆ ತೋರಿಸಿದ್ದು, ನಾನು ಅದನ್ನು ನೋಡಿರುತ್ತೇನೆ. ಈ ವಿಷಯ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

9. ಸಾಕ್ಷಿಯು ತಾನು ಆರೋಪಿ ವಿರುದ್ಧ ನೀಡಿದ ದೂರಿಗೆ ದಾಖಲಾದ ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–23 ಎಂದು ಗುರುತಿಸಲಾಯಿತು. ಘಟನೆ ಸಮಯದಲ್ಲಿ ಆರೋಪಿ ಧರಿಸಿದ್ದ ಶರ್ಟ್ ಮತ್ತು ಲುಂಗಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು–1 ಮತ್ತು 3 ಎಂದು ಗುರುತಿಸಲಾಗಿದೆ. ಆರೋಪಿಯು ಮೃತ ಅಬುತಾಲೀಬರವರನ್ನು ಕೊಲೆ ಮಾಡಲು ಉಪಯೋಗಿಸಿದ ಚಾಕುವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು–2 ಎಂದು ಗುರುತಿಸಲಾಗಿದೆ.

10. ಅದೇ ರೀತಿ ಸಾಕ್ಷಿಯು ಅಬುತಾಲೀಬ ರವರ ಕನ್ನಡಕವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು–5 ಎಂದು ಗುರುತಿಸಲಾಗಿದೆ. ಸಾಕ್ಷಿಯು ಅಬುತಾಲೀಬ

ರವರ ಒಂದು ಚಪ್ಪಲಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-6 ಎಂದು ಗುರುತಿಸಲಾಗಿದೆ. ಸಾಕ್ಷಿಯು ಅಬುತಾಲೀಬ ರವರ ಕೈಯಲ್ಲಿದ್ದ ಅಡಿಕೆ ಮರದ ಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-7 ಎಂದು ಗುರುತಿಸಲಾಗಿದೆ. ಸಾಕ್ಷಿಯು ಅಬುತಾಲೀಬರವರು ಧರಿಸಿದ್ದ ಲುಂಗಿ, ಶರ್ಟ್, ನಿಕ್ಕರನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-8 ರಿಂದ 10 ಎಂದು ಗುರುತಿಸಲಾಗಿದೆ. ಸಾಕ್ಷಿಯು ಚಾಸಾ-10 ರವರ ಮೊಬೈಲ್‌ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-11 ಎಂದು ಗುರುತಿಸಲಾಗಿದೆ. ನಿಪಿ-11 ಮತ್ತು 12 ಛಾಯಾಚಿತ್ರಗಳಲ್ಲಿರುವ ಅಬುತಾಲೀಬ ರವರ ಮೃತ ದೇಹವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಚಾಸಾ-10 ರವರ ಮೊಬೈಲನಲ್ಲಿ ಚಿತ್ರಿಕರಿಸಿದ ದೃಶ್ಯಾವಳಿಯನ್ನು ಸಾಕ್ಷಿಗೆ ತೋರಿಸಲಾಗಿದ್ದು, ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ದೃಶ್ಯಾವಳಿಯಲ್ಲಿ ಮೃತ ಅಬುತಾಲೀಬ, ಆರೋಪಿ, ಚಾಸಾ-11 ಮತ್ತು 12 ರವರು ಕಾಣುತ್ತಿದ್ದಾರೆಂದು ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎ ಎಮ್ ಆರ್ (ಎಲ್ ಎ ಡಿ ಸಿ) ವಕೀಲರಿಂದ**

(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ, ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ